ಆಡದ್ಕ ಹೋಗಿರಬೇಕೆಂದುಕೊಂಡೆ. ಸಪ್ಪನ ಮಾರಿ ಮಾಡಿಕೊಂಡು ಮಡಚಿಟ್ಟಿದ್ದ ಬಟ್ಟೆ ಬರಿಯನ್ನು ಮ್ಯಾಗ ಮ್ಯಾಗ ಗಳಿಗಿ ತೆಗದು ಮಡಚದ್ಕ ಸುರು ಮಾಡಿದ ಸುಮ್ಮಿಯನ್ನು ಮೆಲ್ಲಕ ಕರದಿದ್ದಕ್ಕ ಬಂದಳು. ಮಾರಿ ಸಣ್ಣದಾಗಿ ಮಡಮಿ ಆಗಿದ್ದು ನೋಡಿ ಅಕಿನ ಪರಿಸ್ಥಿತಿಯನ್ನು ತಿಳಕೊಂಡೆ. ಅವಳ ಮನಸ್ಸಿನ್ಯಾಗ ಆಸೆ ಉಕ್ಕುತ್ತಿರದು ಕಾಣಿತು. ಮೆಲ್ಲಕ ಅವಳ ಕರಿ ಒಕ್ಕಳ ಮುಚ್ಚಿದ ಸೀರಿ ದಡಿಯನ್ನು ನಿಧಾನಕ್ಕ ಸರಿಸಿ ಕೈಯಾಡಿಸಿದ ತಪ್ಪಿಗೆ ಅಂಬ್ರಿಸಿ ತೆಕ್ಕಿಗೆ ಬಿದ್ದಳು. ಖಬರು ತಪ್ಪಿ ಹೌಹಾರಿದ ನಾವು ಏನೂ ಲೆಕ್ಕಿಸದೆ ಹಗಲಿನಿಲ್ಲಿ ಹೆಗಲಿಗೆ ಹೆಗಲು ನೀಡಿ ಹಗುರಾಗಿ ಹ್ಞೂ ಗುಟ್ಟತ್ತ ಅಂಗಾತ ಬಿದ್ದುಕೊಂಡೆವು. ತಣ್ಣಗೆ ಹಣಿಮ್ಯಾಗ ನೀರು ಬಸಿಯಿಟ್ಟಿದ್ದನ್ನು ಸೆರಗ ತುದಿಯಿಂದ ಒರಸಿ ಗಾಳಿ ಬೀಸಿದಳು. ಮೈ ವಜ್ಜಿಯಾಗಿ ದಣಕಂಡಂಗಾಗಿ ಗಾಳಿಗೆ ಕಣ್ಣುಗಳು ಮೆಲ್ಲಕ ನಿದ್ದಿಗೆ ಹ್ವಾದವು.

* * *

ನಾನಾಗ ಏಳನೇಯ ತರಗತಿ ಇದ್ದಿರಬಹುದು. ಬಸಲಿಂಗನ ಜೋಡಿನೇ ನನಗ ಭಾಳ್ ಗೆಳೆತನ ಕೂಡದು ಆಡದು ಇತ್ತು ಎಲ್ಲಾ. ಬಸಲಿಂಗ ನನಗಿಂತ ಯಾಡ್ಮೂರು ವರ್ಷ ದೊಡ್ಡವನಷ್ಟೇ ಇರಬಹುದು. ಅವ್ನು ಬ್ಯಾರೆ ಯಾರು ಆಗಿರಲಿಲ್ಲ ನಮ್ಮ ಮಾಮನ ಮಗನೇ ಆಗಿದ್ದ. ಸಾಲಿಗಿ ಹ್ವಾದ್ರು ಅವನ ಜೋಡಿನೇ, ಅಡ್ಡ್ಯಾಡಿದ್ರು ಅವನ ಕೂಡಿನೇ. ಉಂಡ್ರು ಉಪ್ವಾಸಿದ್ರು ಅವನ ಕೂಡಿನೇ. ಅಷ್ಟಂದು ಸಹವಾಸ ಅಲೆದಾಟ ರೂಢಿಯಾಗಿಬಿಟ್ಟಿತ್ತು.

ಆಗಾಗ ಅವ್ನು ಗಮತು ಚ್ಯಾತಿ ಅಂತ ನಗಾಡ್ತಾ ನನ್ನ ಎದಿಯನ್ನು ತನ್ನೆರಡು ಬೆರಳಿಂದ ಬ್ಯಾನಿ ಆಗುವಷ್ಟು ಒತ್ತಿ ಹಿಸುಕುತ್ತಿದ್ದ. 'ಅಯ್ ಬಿಡ್ಲೇ ಬ್ಯಾನಿ ಆಗ್ತದ. ಯವ್ವಾ..!' ಎಂದು ಕಿರುಚುತ್ತಿದ್ದೆ. ನಗಾಡುತ್ತಾ ಅವ್ನು, 'ಬ್ಯಾನಿ ಆಯಿತು..? ಏನಾಗಿಲ್ವಾ..?' ಎಂದು ಕೇಳತ್ತಿದ್ದ. ಹಂಗ್ಯಾಕ ಮಾಡ್ತಾನ ಇವ ಅನಸ್ತಿತ್ತು. ಬರು ಬರ್ತಾ ನನ್ನೆದಿಗಳು ಉಬ್ಬಿದಂತಾಗಿದ್ವು. ಅವನು ನನಗಿಷ್ಟಂತ ಸುಮ್ನಾಗುತ್ತಿದ್ದೆ. ಯಾರಿಲ್ಲದಾಗ, 'ಕುಸ್ತಿ ಆಡಮು ಬಾರಲೇ'ಯೆಂದುಕೇಸಿ ಒಬ್ಬರ ಮ್ಯಾಗ ಒಬ್ಬರು ಬಿದ್ದು ಯಾರಿಲ್ಲದ ಮನ್ಯಾಗ ಪಡಸಾಲಿಯುದ್ದಕ್ಕೂ ಉರಳಾಡುತ್ತಿದ್ವಿ. ನನ್ನ ಬೆನ್ನ ಮ್ಯಾಗ ಬಿದ್ದು ಮೇಲೆ ಏಳಲಾರದಂಗ ಕುಂಡಿ ಮ್ಯಾಗ ಬೀಳುತ್ತಿದ್ದ. ಮ್ಯಾಗ ಬಿದ್ದವ ಎದ್ದೆದ್ದು ಬೀಳ್ತಿದ್ದ. 'ಉಸಿರು ಗಟ್ಟುತ್ತಾದ ಎದ್ದೇಳಲೇ' ಎಂದರೂ, 'ಸುಮ್ಮಕ್ಕರಲೇ' ಎಂದು ಮ್ಯಾಗ ಬೀಳುತ್ತಿದ್ದ. ನನ್ನ ಮೈಯೆಲ್ಲ ಪೂರ ಹಿಸುಕಿ ಬ್ಯಾನಿ ಮಾಡ್ತಿದ್ದ. ಯಾವಾಗಲು ಕುಸ್ತಿದಾಗ ನನ್ನನ್ನು ಮಣಿಸಿಗೇಸಿ ಅವನೇ ಗೆಲ್ಲುತ್ತಿದ್ದ.

ಒಮ್ಮಿ ಅವ್ನ ಮನಿಗೆ ಬರೋದಕ್ಕೆ ತಾನಾಗಿಯೇ ಹೇಳಿದ್ದ. ನಾನ್ ಹೋಗದ್ರಾಗ ಬಚ್ಚಲದಾಗ ಪೂರಾ ಬೆತ್ತಲಾಗಿ ಗ್ವಾಡಿಗಿ ಒರಕೊಂಡಿದ್ದ. ನೋಡು ನೋಡುತ್ತಿದಂತೆ ತನಗೆ ಅರಿವಿಲ್ಲದಂತೆ ಮತ್ತೇರಿದವನಂತೆ ಇದ್ದವ, ಮೆಲ್ಲಕ ಸಮಾಧಾನ ಆಗುತ್ತಾ ವಾಸ್ತವಕ್ಕ ಬಂದವನೇ ದಿಗ್ಗನ್ ನಿದ್ದಿಗಣ್ಣಿಂದ ಎಚ್ಚರವಾದವನಂತೆ ಅಲ್ಲಿಂದ ಹೊರಟ. ನನಗೆ ಅವತ್ತು ಕಂಡಿದೆಲ್ಲ ಹೊಸದಾಗಿತ್ತು. ಅಂಗದನಂತ ಅವ್ನ ಸಹವಾಸನೇ ಪೂರ ಬಿಡಬೇಕು ಅಂತಾನೇ ಮಾಡಿದ್ದೆ. ಯಾಡು ದಿನ ಮಾತು ಮುರುದುಕೊಂಡು ಅವ್ನು ಇರಕಡೆ ಅಣಿಕಿ ಹಾಕಲಿಲ್ಲ. ಆಗ ಅವ್ನು ಏಕಾಂತದಾಗ ತಲ್ಲೀನನಾಗಿದ್ದು. ಮೈ ಮರತಿದ್ದದ್ದು ನನ್ನನ್ನು ಕಾಡಿತು. ಅವ್ನ ಬಿಟ್ಟಿರದು ಆಗಲಿಲ್ಲ. ಕಡೀಗಿ ನಾನೇ ಅವನಿರಲ್ಲಿಗೆ ಹೋಗಿ ಮಾತಾಡಿಸಿದೆ.

'ಹಂಗ್ಯಾಕಲೇ ಮಾಡ್ತಿದ್ದೀ' ಎಂದೆ.

'ಯಾವಾಗ?'

'ಅವತ್ತು' ಎಂದೆ. ಆಸಾಮಿ ಅಷ್ಟಕ್ಕೆ ಗಪ್ಪಾದ. ಮಾರಿ ಕೆಳಗಾಕಿ ಅದು ಇದು ಎನ್ನುತ್ತಾ ಮಾತು ತೊದಲಕತ್ತಿದ್ದ. 'ಇಲ್ಲಾ... ಸ್ವಾರಿ, ಲೇ ಅದು, ಹ್ಯs ಯಾರಿಗೂ ಹೇಳಬೇಡ ಆಯ್ತಾ, ಅದು ಹಂಗೆ ಒಂತರ ಮಜಾ' ಅಂತ ಎನೇನೋ ಅಂತಿದ್ದ. ನಾನು ಅಷ್ಟಕ್ಕೆ ಸುಮ್ಕಾದೆ. ಸಲ್ಪ ಹೊತ್ತು ಸುಮ್ಮನೆ ಆದ್ವಿ. ಮಾತುಗಳು ಇಬ್ಬರಿಂದನೂ ನಾಚಿಕೊಂಡವು. ನಾನೇನು ಅನ್ನಲಿಲ್ಲ. ತಕ್ಷಣ ಅವ್ನು ಏನನ್ನೂ ಹೇಳದೆ ಎದ್ದೋದದ್ದು ನೋಡಿ ನನಗೆ ಇರಿಸು ಮುರಿಸು ಇಟ್ಟಂಗಾತು. ದಿನ ಕಳದು ಮ್ಯಾಗ ಅದು ನಮ್ಮಿಬ್ಬರಲ್ಲಿ ಬರುಬರುತ್ತಾ ಪೂರ ಸಹಜ ಆಗಕದ್ಕ ಸುರುವಾಯ್ತು. ಅವನು ಇನ್ನಿಲ್ಲದಂತೆ ನನ್ನನ್ನು ಸೆಳಿತಿದ್ದ. ಯಾರಿಲ್ಲದ ಟೈಮನ್ನು ನಾವು ಹುಡ್ಕದಕ್ಕ ಸುರುಮಾಡಿದೆವು. ಗಂಡ ಹೆಣ್ತಿಯಂಗ ಬಿಟ್ಟಿರಲಾದಷ್ಟು ಕೂಡುತ್ತಿದ್ವಿ. ಅವ್ನು ಬಿಟ್ರು ನಾನು ಒಂದ್ ಕ್ಷಣ ಬಿಡುತ್ತಿರಲಿಲ್ಲ. ಅಷ್ಟಂದು ಗೆಳೆತನ ನಮ್ಮಿಬ್ಬರಲ್ಲಿ ಸುರು ಆಯ್ತು. ದಿನ ಹೋದಂತೆ ಒಮ್ಮೆ